# 8

# ದೇವರು ಅದ್ಭುತ ಕಾರ್ಯಗಳನ್ನು ಮಾಡಿದನೋ?

ಬೈಬಲಿನ ಪ್ರಕಾರವಾಗಿ, ಮಾನವ ಚರಿತ್ರೆಯಲ್ಲಿ ಕೆಲವು ಸಮಯಗಳಲ್ಲಿ ದೇವರು ಅದ್ಭುತಕಾರ್ಯಗಳನ್ನು ಮಾಡಿದ್ದಾನೆ. "ಕ್ರೈಸ್ತತ್ವದ ಅದ್ಭುತಕಾರ್ಯಗಳು ಸಂಭವಿಸಿ ದವೋ?" ಎಂಬ ನಿರ್ದಿಷ್ಟವಾದ ಪ್ರಶ್ನೆಯನ್ನು ನಾವು ಯೋಚಿಸುತ್ತೇವೆ. ಡೇವಿಡ್ ಹ್ಯೂಮ್ ಅವರು ಈ ಪ್ರಶ್ನೆಯನ್ನು ವಿಚಾರಿಸುತ್ತ, ತಾನು ತನ್ನ ಸ್ವಂತ ಅನುಭವವನ್ನು ಅದ್ಭುತಕಾರ್ಯಗಳಿಗಾಗಿ ಸಾಕ್ಷಿಗಳ ನಂಬಲರ್ಹತೆಗೆ ವಿರುದ್ಧವಾಗಿ ತೂಕಮಾಡ ಬೇಕೆಂದು ತೀರ್ಮಾನಿಸಿಕೊಂಡರು.

## ಒಂದು ತಪ್ಪು ಇರಬಹುದೋ?

ಸಾಕ್ಷಿಯಲ್ಲಿ ಒಂದು ತಪ್ಪು ಇಲ್ಲವೇ ಮೋಸ ಇರಬಹುದೋ? ಅದ್ಭುತಕಾರ್ಯಗಳಲ್ಲಿ ನಂಬಿಕೆಯು ಸಾಕ್ಷಿಯನ್ನು ತಿರಸ್ಕರಿಸುವದಕ್ಕಿಂತ ಸುಲಭವಾಗಿರುವುದೋ? ಎಡ್ವಿನ್ ಎ. ಬರ್ಟ್ಟ ಅವರ ಪ್ರಕಾರ, ಕೆಲವು ಸಂಗತಿಗಳಲ್ಲಿ, "ಸುಳ್ಳುತನವನ್ನು ಸ್ಥಾಪಿಸಲು ಪ್ರಯಾಸಪಡುತ್ತಿರುವ ಸಂಗತಿಗಿಂತ ಹೆಚ್ಚು ಅದ್ಭುತಕರವಾದದ್ದಾಗಿರುತ್ತದೆ."

ಬಹಳವಾಗಿ ಸಂದೇಹವುಳ್ಳವನಾಗಿರುವುದು ಯಾವುದನ್ನಾದರೂ ನಂಬುವಷ್ಟು ಅಕಾರಣವಾದದ್ದಾಗುತ್ತದೆ. ಸ್ವತಂತ್ರವುಳ್ಳ, ಪೂರ್ವಾಪರ ದೋಷಾರೋಪಣೆಯಿಲ್ಲದ, ಗಂಭೀರವಾದ ಮತ್ತು ಯಥಾರ್ಥವಾದ ಹಲವಾರು ಸಾಕ್ಷಿಗಳು ಇದ್ದರೆ, ಮತ್ತು ಪ್ರಸಿದ್ಧ ವಾದ ಸ್ಥಳದಲ್ಲಿ ಘಟನೆಯು ಸಂಭವಿಸಿದ್ದರೆ, ಇವು ನಂಬಲರ್ಹ ಸ್ವೀಕಾರಯೋಗ್ಯ ನಿಯಮಗಲಾಗುತ್ತವೆ.

## ಯೇಸುವಿನ ಪುನರುತ್ಥಾನದ ಬಗ್ಗೆ ಯೋಚಿಸಿರಿ

ಗಾಯಗೊಂಡ ಯೇಸುವಿನ ದೇಹವು ಪುನಃ ಜೀವಿಸಿದ್ದರೆ, ಆಗ ನಮ್ಮ ಪುನರುತ್ಥಾನಕ್ಕೆ ನಿರೀಕ್ಷೆ ಇರುವುದು ಮತ್ತು ಬೈಬಲಿನ ಇತರ ಎಲ್ಲಾ ಕಾರ್ಯಗಳು ನಂಬಲಿಕ್ಕೆ ಸುಲಭವಾದವುಗಳಾಗುವವು. ಯೇಸುವಿನ ದೇಹವು ಎಬ್ಬಿಸಲ್ಪಡದಿದ್ದರೆ, ಆಗ ನಮ್ಮ ನಿರೀಕ್ಷೆಯು ವ್ಯರ್ಥವಾದದ್ದಾಗಿರುವುದು ಮತ್ತು ಬೇರೆ ಯಾವುದೇ ಅದ್ಭುತಕಾರ್ಯವು ಯೋಚಿಸಲಿಕ್ಕೆ ಬೆಲೆಯಿಲ್ಲದ್ದಾಗುವುದು. ಆದುದರಿಂದ, ಕ್ರೈಸ್ತತ್ವವು ಒಂದು ಅದ್ಭುತಕಾರ್ಯದ ಮೇಲೆ ನಿಲ್ಲುವುದು ಇಲ್ಲವೇ ಬೀಳುವುದು.

ಪುನರುತ್ಥಾನಕ್ಕಾಗಿ ಸಾಕ್ಷಿಯ ಬಗ್ಗೆ ಏನು? ಐದು ನೂರಕ್ಕಿಂತಲೂ ಹೆಚ್ಚು ಜನರು ತಮ್ಮ ಸ್ವಂತ ಕಣ್ಣುಗಳಿಂದ ಪುನರುತ್ಥಾನಾದ ಕ್ರಿಸ್ತನನ್ನು ನೋಡಿದ್ದೇವೆಂದು ಸಾಕ್ಷಿಕೊಟ್ಟಿದ್ದಾರೆ, (1 ಕೊರಿಂಥ 15:6). ಸುವಾರ್ತೆಯ ವೃತ್ತಾಂತಗಳು, ಒಂದಕ್ಕೊಂದು ವಿರೋಧವಾದವುಗಳಾಗಿರದಿದ್ದರೂ, ಬರೆಯುವದರಲ್ಲಿ ಸ್ವತಂತ್ರವಾಗಿರುವಷ್ಟು

ಭಿನ್ನವಾದವುಗಳಾಗಿವೆ, ಅದು ತಂತ್ರವಲ್ಲ. ಶಾಂತಚಿತ್ತರಾದ, ವಿವೇಕವುಳ್ಳ ಜನರು ಪುನರುತ್ಥಾನವು ಮುಂದೆ ಬರಲಿರುವದನ್ನು ನಂಬಿರಲಿಲ್ಲ. ಅದರ ಬಗ್ಗೆ ಮೊದಲು ಕೇಳಿದಾಗಲೂ ಅವರು ಅದನ್ನು ನಂಬಲಿಲ್ಲ. ಕೆಲವರು ಉತ್ಥಾನವಾದ ಕ್ರಿಸ್ತನನ್ನು ನೋಡಿದ  ನಂತರವೂ ಸ್ಪರ್ಶಿಸಿದ ನಂತರವೂ "ಅವರ ಅಪನಂಬಿಕೆಗೂ ಅವರ ಮನಸ್ಸಿನ ಕಾಠಿಣ್ಯತೆಗೂ ... ಗದರಿಸಲ್ಪಟ್ಟರು" (ಮಾರ್ಕ 16:14). ಈ ಜನರು ಹ್ಯೂಮನಂತೆ ಪುನರುತ್ಥಾನದ ವಿಚಾರಕ್ಕೆ ವಿರುದ್ಧವಾಗಿ ದುರಾಗ್ರಹವುಳ್ಳವರಾಗಿದ್ದರು; ಅವರ ಮನವೊಲಿಸಬೇಕಾಗಿತ್ತು. ಅನಂತರದಲ್ಲಿ, ಅವರ ನಿತ್ಯತ್ವದ ಪರಿಣಾಮವು ಪುನರುತ್ಥಾನದ ಮೇಲೆ ಅವಲಂಭಿಸಿರುವದು ಎಂಬುದನ್ನು ಅರ್ಥಮಾಡಿಕೊಂಡು, ಕ್ರಿಸ್ತನು ಸಮಾಧಿಯಲ್ಲಿಟ್ಟ ನಂತರ, ಕ್ರಿಸ್ತನೊಂದಿಗೆ ತಾವು ಊಟಮಾಡಿದ್ದೇವೆಂದು ತಮ್ಮ ಜೀವಿತಗಳೊಂದಿಗೆ ಸಾಕ್ಷಿಕೊಡಲು ಸಿದ್ಧರಾದರು.

"ಪ್ರಾಮಾಣಿಕತೆ" ಎಂಬುದನ್ನು ಬಿಟ್ಟು ಬೇರೆ ಯಾವ ಪದವು ಅಂಥ ನಡತೆಯನ್ನು ವಿವರಿಸಲಾರದು. ಆಧುನಿಕ ಪ್ರಯೋಗವಾದಿಗಳಂತೆ ಅವರು ವಿಮರ್ಶಾತ್ಮಕವಾಗಿ ಪರೀಕ್ಷಿ ಸಿದರು. ಅವರು ಪ್ರಯೋಗಾತ್ಮಕ ವಿಧಾನಗಳನ್ನು ಅನುಸರಿಸಿದರು: ಸಮಾಧಿ ಯೊಳಗಿನ ಶವದ ನಾರುಮಡಿ ವಸ್ತ್ರಗಳನ್ನೂ ತಲೆ ಪಾವುಡವನ್ನೂ ಅವರು ಪರೀಕ್ಷಿಸಿದರು. ಸಾಕ್ಷಿಗಳು ಪ್ರಶ್ನಿಸಿಲ್ಪಟ್ಟರು. ಜೀವದ ವಾಕ್ಯವನ್ನು ಅವರು ತಮ್ಮ ಸ್ವಂತ ಕೈಗಳಿಂದ ಉಪಯೋಗಿಸಿದರು!

## ಕೃತಕ ಅದ್ಭುತ ಕಾರ್ಯಗಳು ಹೋಲಿಸಲಾರವು

ಸುಳ್ಳು ಧರ್ಮಗಳ ಅದ್ಭುತ ಕಾರ್ಯಗಳು ಕ್ರೈಸ್ತತ್ವದ ಅತಿಶ್ರೇಷ್ಠ ಅದ್ಭುತ ಕಾರ್ಯದೊಂದಿಗೆ ಹೋಲಿಸಲ್ಪಡಲಾರವು. ಪುನರುತ್ಥಾನಕ್ಕಾಗಿ ಪುರಾವೆಗಳು ಇಸ್ಲಾಮ ಇಲ್ಲವೇ ಬೌದ್ಧ ಧರ್ಮದ ಯಾವುದೇ ಅದ್ಭುತ ಕಾರ್ಯಕ್ಕಿಂತ ಎಷ್ಟೋ ಹೆಚ್ಚು ಮಿಗಿಲಾಗಿವೆ. ಘಟನಾತ್ಮಕ ಕಾನೂನು ಬದ್ಧ ರುಜುವಾತಿನಲ್ಲಿ ನಮ್ಮ ಕರ್ತನ ಪುನರುತ್ಥಾನವು ಅತ್ಯುತ್ತಮವಾಗಿ ದೃಢಪಡಿಸಲ್ಪಟ್ಟ ಐತಿಹಾಸಿಕ ಘಟನೆಯಾಗಿದೆ.

© 2009 Truth for Today